ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿ ಕೊಡಲಾಗುವುದು. ಈಗ ಒಂದು ಪ್ರಕಟಣೆ ಇದೆ.

2. ಪ್ರಕಟಣೆ

ವಿಷಯ: ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶ

ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು 2009ನೇ ಸಾಲಿನ ಕರ್ನಾಟಕ ಅರಣ್ಯ ತಿದ್ದುಪಡಿ ವಿಧೇಯಕವನ್ನು ದಿನಾಂಕ 24–7–2009ರಂದು ಯಾವುದೇ ತಿದ್ದುಪಡಿಗಳಿಲ್ಲದೇ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳನ್ನು ಮಾನ್ಯ ಮುಖ್ಯಮಂತ್ರಿಯವರು ಸಭೆಯ ಮುಂದಿಡುವುದು.

3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಯವರು): ಮಾನ್ಯ ಅಧ್ಯಕ್ಷರೆ, ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತ ಲೆಕ್ಕ ನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್ 2008ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡರುವ ಪಂಚಾಯತ್ ರಾಜ್ ಸಂಸ್ಥೆಗಳ ಲೆಕ್ಕ ಪರಿಶೋಧನಾ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

4. ನಿಯಮ 60ರ ಅಡಿಯಲ್ಲಿ
ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ

ವಿಷಯ: ದಿನಾಂಕ 25–6–2009ರಂದು ರಾಜ್ಯ ಸರ್ಕಾರದ ಆದೇಶದ ಮೇರೆಗೆ ಮುಖ್ಯ ಕಾರ್ಯದರ್ಶಿಯವರು ಹೊರಡಿಸಿರುವ ಸುತ್ತೋಲೆಯ ಬಗ್ಗೆ

ಅಧ್ಯಕ್ಷರು: ಈಗ ಬೇಡಿಕೆಗಳ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡಬಹುದಲ್ಲಾ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನನ್ನದು ಒಂದು ನಿಲುವಳಿ ಸೂಚನೆ ಇದೆ. ನಾನು ತಮಗೆ ಮನವರಿಕೆ ಮಾಡುತ್ತೇನೆ. ಆನಂತರ ತಾವು ಏನು ಮಾಡಬೇಕೆಂದು ನಿರ್ಧಾರ ಮಾಡಿ.

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಒಂದು ನಿಮಿಷ. ತಾವು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೀರಿ, ಮಾನ್ಯ ವಿರೋಧ ಪಕ್ಷದ ನಾಯಕರು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ವಿರೋಧ ಪಕ್ಷದ ನಾಯಕರೊಡನೆ ಮಾತನಾಡಿದ್ದೇನೆ.

ಅಧ್ಯಕ್ಷರು: ಒಂದು ನಿಮಿಷ, ನಾನು ಹೇಳಿದ ಮೇಲೆ ತಾವು ಮಾತನಾಡಿ. ನಾನು ಬೇರೆ ವಿಷಯವನ್ನು ಮಾತನಾಡುವವನಿದ್ದೇನೆ. ನಾನು ಹೇಳುವುದೇನೆಂದರೆ ಇವತ್ತು ವಿತ್ತೀಯ ಕಾರ್ಯಕಲಾಪವಿದ್ದು ಡಿಮಾಂಡ್ಸ್ ಮೇಲೆ ಚರ್ಚೆ ಇದೆ. ಇದು ಇನ್ನೂ ಪ್ರಾರಂಭವಾಗಿಲ್ಲ. ಈ ನಿಲುವಳಿ ಸೂಚನೆ ಎಲ್ಲಿಯವರೆಗೆ ಎಂದು ನಾನು ಕೇಳುತ್ತಿದ್ದೇನೆ. ತಾವೆಲ್ಲರೂ ಡಿಮಾಂಡ್ಸ್ ಮೇಲೆ ಎಲ್ಲಾ ವಿಷಯಗಳನ್ನು ಚರ್ಚೆ ಮಾಡಬಹುದಲ್ಲಾ ಎಂದು ಹೇಳುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಈಗ ವಿಷಯವನ್ನು ಮಂಡಿಸುತ್ತೇನೆ. ತಾವು ಅಮೇಲೆ ನಿರ್ಣಯ ಕೊಡಿ.

ಅಧ್ಯಕ್ಷರು: ಈಗ ನಿಮ್ಮದೊಂದು ನಿಲುವಳಿ ಸೂಚನೆ ಇದೆ, ಮಾನ್ಯ ವಿರೋಧ ಪಕ್ಷದ ನಾಯಕರದು ಒಂದು ನಿಲುವಳಿ ಸೂಚನೆ ಇದೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಅವರ ಹತ್ತಿರ ಮಾತನಾಡಿದ್ದೇನೆ. ಮಾನ್ಯ ಸಿದ್ದರಾಮಯ್ಯನವರೆ, ನಾನು ಎರಡು ನಿಮಿಷಗಳಲ್ಲಿ ಮಂಡಿಸುತ್ತೇನೆ. ಅನಂತರ ಮಾನ್ಯ ಅಧ್ಯಕ್ಷರು ಏನು ಮಾಡುತ್ತಾರೋ ಮಾಡಲಿ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಮೊದಲು ನಾನು ಕೊಟ್ಟಿರುವ ವಿಚಾರವನ್ನು ತೆಗೆದುಕೊಳ್ಳಿ, ನಾಳೆ ಬೇಕಾದರೆ ಅದನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು: ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಫ್ಲೋರ್ ಲೀಡರ್ ಮಾನ್ಯ ರೇವಣ್ಣನವರು you have to decide; ಯಾವ ವಿಷಯವನ್ನು priority ಮೇಲೆ ತೆಗೆದುಕೊಳ್ಳಬೇಕೆಂದು ನೀವೇ ಹೇಳಿ.

ಶ್ರೀ ಸಿದ್ದರಾಮಯ್ಯ: ವಿರೋಧ ಪಕ್ಷದ ನಾಯಕರು ಕೊಟ್ಟಿರುವಂಥ ಸೂಚನೆಗೆ ಆದ್ಯತೆಯನ್ನು ಕೊಡಬೇಕು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಸಿದ್ದರಾಮಯ್ಯನವರೆ, ನಾನು ಎರಡು ನಿಮಿಷಗಳಲ್ಲಿ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಆನಂತರ ಮಾನ್ಯ ಅಧ್ಯಕ್ಷರು ಏನು ಮಾಡಬೇಕೋ ಮಾಡಲಿ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಇವತ್ತು ನಾನು ಕೊಟ್ಟಿರುವ ವಿಚಾರವನ್ನು ತೆಗೆದುಕೊಳ್ಳಿ, ನಾಳೆ ಬೇಕಾದರೆ ಅದನ್ನು ತೆಗೆದುಕೊಳ್ಳಿ.

ಅಧ್ಯಕ್ಷರು: ಈಗ ಮಾನ್ಯ ರೇವಣ್ಣನವರು ಸಹಕಾರ ಕೊಡಬೇಕು.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಎರಡು ನಿಮಿಷಗಳಲ್ಲಿ ಹೇಳುತ್ತೇನೆ. ಇದು important ಇದೆ.

ಶ್ರೀ ಸಿ.ಟಿ. ರವಿ: ಮಾನ್ಯ ರೇವಣ್ಣನವರೆ, ಈಗ ಟೈಮ್ ಚೆನ್ನಾಗಿಲ್ಲ, 12.15 ಗಂಟೆಗಳಾಗಿದೆ.

ಶ್ರೀ ಹೆಚ್.ಡಿ. ರೇವಣ್ಣ; ಮಾನ್ಯ ಅಧ್ಯಕ್ಷರೆ, ನಾನು 25ನೇ ತಾರೀಖಿನಂದೇ ಇದನ್ನು ಕೊಟ್ಟಿದ್ದೇನೆ. ದಯಮಾಡಿ ನನಗೆ ಎರಡು ನಿಮಿಷಗಳ ಕಾಲಾವಕಾಶವನ್ನು ಕೊಡಿ.

ಶ್ರೀ ಸಿದ್ದರಾಮಯ್ಯ: ನೀವು ಪ್ರಸ್ತಾಪ ಮಾಡುವ ವಿಷಯದಲ್ಲಿ ನಾನು participate ಮಾಡುತ್ತೇನೆ. ಅದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಎರಡು ನಿಮಿಷಗಳಲ್ಲಿ ಹೇಳುತ್ತೇನೆ.

ಅಧ್ಯಕ್ಷರು: ಇವತ್ತು ಒಂದು ವಿಷಯವನ್ನು ತೆಗೆದುಕೊಳ್ಳೋಣ, ನಾಳೆ ಇನ್ನೊಂದು ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ವಿಷಯವನ್ನು ಸದನದ ಮುಂದೆ ಮಂಡಿಸುತ್ತೇನೆ.

(ಗೊಂದಲ)

ಶ್ರೀ ಸಿ.ಟಿ. ರವಿ: ಮಾನ್ಯ ಅಧ್ಯಕ್ಷರೆ, ಅವರಿಬ್ಬರೂ ತೀರ್ಮಾನ ಮಾಡುವುದರೊಳಗೆ ನಾನು ಒಂದು ಮಹತ್ವವಾದ ವಿಷಯ ಕೇಳುವುದು ಇದೆ.

ಶ್ರೀ ಸಿದ್ದರಾಮಯ್ಯ: ಈಗ ಅದು ಆಗುವುದಿಲ್ಲ ಕುಳಿತುಕೊಳ್ಳಿ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಎರಡೇ ನಿಮಿಷಗಳಲ್ಲಿ ತಮಗೆ ಹೇಳುತ್ತೇನೆ.

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ಆ ರೀತಿ allow ಮಾಡುವುದಕ್ಕೆ ಆಗುವುದಿಲ್ಲ. ಅದನ್ನು ನಾಳೆ ತೆಗೆದುಕೊಳ್ಳಿ. ಈಗ ಪ್ರಸ್ತಾಪ ಮಾಡಿದರೆ ಚರ್ಚೆ ಮಾಡಬೇಕಾಗುತ್ತದೆ. ಮಾನ್ಯ ಅಧ್ಯಕ್ಷರೆ, ಈಗ ಅವರು ಕೂಡ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದಾರೆ, ನಾನು ಕೂಡ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ. ಅವರು ಕೊಟ್ಟಿರುವ ನಿಲುವಳಿ ಸೂಚನೆಯನ್ನು ನಾಳೆ ತೆಗೆದುಕೊಳ್ಳಿ.

ಇವತ್ತು ನಾನು ಪ್ರಸ್ತಾಪ ಮಾಡುವುದಕ್ಕೆ ದಯಮಾಡಿ ಅವಕಾಶವನ್ನು ಮಾಡಿಕೊಡಿ. ನಾನು ಮಾನ್ಯ ರೇವಣ್ಣನವರಿಗೆ ಹೇಳಿದ್ದೇನೆ. ನಾಳೆ ಅದನ್ನು ತೆಗೆದುಕೊಳ್ಳಿ, ಇವತ್ತು ಇದನ್ನು ತೆಗೆದುಕೊಳ್ಳಿ. ಮಾನ್ಯ ರೇವಣ್ಣನವರೆ, ತಾವು ಸ್ವಲ್ಪ ಸಹಕರಿಸಬೇಕು. ನಾನು ಕೊಟ್ಟಿರುವ ವಿಚಾರ ತೆಗೆದುಕೊಳ್ಳಲಿ, ಇದು ಆದ ಮೇಲೆ ನೀವು ಚರ್ಚೆ ಮಾಡಿ.

ಅಧ್ಯಕ್ಷರು: ಆಯಿತು, ಹಾಗೆ ಮಾಡೋಣ. ಮಾನ್ಯ ರೇವಣ್ಣನವರೆ, ತಾವು ಕೊಟ್ಟಿರುವ ವಿಷಯವನ್ನು ನಾಳೆ ತೆಗೆದುಕೊಳ್ಳುತ್ತೇನೆ. ಮಾನ್ಯ ವಿರೋಧ ಪಕ್ಷದ ನಾಯಕರು request ಮಾಡುತ್ತಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ,...

ಶ್ರೀ ಸಿದ್ದರಾಮಯ್ಯ: ಮಾನ್ಯ ರೇವಣ್ಣನವರೆ, ಆ ರೀತಿ ಮಾತನಾಡುವುದಕ್ಕೆ ಬರುವುದಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ನಾನು ಈ ವಿಷಯವಾಗಿ ಮಾತನಾಡುವುದಿಲ್ಲ, ಬೇರೆ ವಿಷಯದ ಮೇಲೆ ಮಾತನಾಡುತ್ತೇನೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರು request ಮಾಡುತ್ತಿದ್ದಾರೆ. ನಾಳೆ ನಿಮ್ಮ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಬೆಳಿಗ್ಗೆ ನಿಲುವಳಿ ಸೂಚನೆಯನ್ನು...

ಅಧ್ಯಕ್ಷರು: ಮಾನ್ಯ ರೇವಣ್ಣನವರೆ, ಒಂದು decide ಮಾಡೋಣ. ಇಲ್ಲಿ ಏನಾಗುತ್ತದೆ ಎಂದರೆ mention ಮಾಡಿದ ಮೇಲೆ again you have to start it.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ವಿಷಯವನ್ನು ಪ್ರಸ್ತಾಪ ಮಾಡುವುದಿಲ್ಲ.

ಅಧ್ಯಕ್ಷರು: ಈಗ ಅವರು mention ಮಾಡಿದರೆ ಅವರ ವಿಷಯವನ್ನು ತೆಗೆದುಕೊಳ್ಳ ಬೇಕಾಗುತ್ತದೆ. ನೀವು mention ಮಾಡಿದರೆ ನಿಮ್ಮ ವಿಷಯವನ್ನು ತೆಗೆದುಕೊಳ್ಳ ಬೇಕಾಗುತ್ತದೆ. You have toprefer it, either this one or that one. You have to decide it. ನಾಳೆ ಒಂದು ವಿಷಯವನ್ನು ತೆಗೆದುಕೊಳ್ಳೋಣ. ನಾನು ಚರ್ಚೆಗೆ ಅವಕಾಶ ಕೊಡುವುದಿಲ್ಲವೆಂದು ಏನು ಹೇಳಿಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ.

ಅಧ್ಯಕ್ಷರು: ಒಂದು ಸಲ start ಆಯಿತೆಂದರೆ...

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ನಾನು ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಿ. ಅವರಿಗೆ ಅಮೇಲೆ ಅವಕಾಶವನ್ನು ಕೊಡಿ.

ಅಧ್ಯಕ್ಷರು: ಆ ರೀತಿ ಆಗುವುದಿಲ್ಲ.

ಶ್ರೀ ಸಿದ್ದರಾಮಯ್ಯ: ಆ ರೀತಿ ಮಾತನಾಡುವುದಕ್ಕೆ ಬರುವುದಿಲ್ಲ.

ಅಧ್ಯಕ್ಷರು: ಹಾಗೆ ಆಗುವುದಿಲ್ಲ. ನಾನು debate ಮಾಡುವುದು ಬೇಡವೆಂದು ಹೇಳಿಲ್ಲವಲ್ಲಾ, ನಾನು ಅವಕಾಶವನ್ನು ಕೊಡುತ್ತೇನೆ. ನಾನು reject ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ: I hope that; he has agreed. ತಾವು ಒಪ್ಪಿಕೊಂಡಿದ್ದೀರಲ್ಲಾ, ಅವರು ಒಪ್ಪಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ: ನಾನು ಆ ವಿಷಯವನ್ನು ಹೇಳುವುದಕ್ಕೆ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಮನವಿ ಮಾಡಿದ್ದೇನೆ. ಅದಕ್ಕೆ ನೀವು ಬಿಡುವುದಿಲ್ಲವೆಂದರೆ ನಾನು ಏನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಸಿದ್ದರಾಮಯ್ಯ (ವಿರೋಧ ಪಕ್ಷದ ನಾಯಕರು): ನಾನು ಮಾತನಾಡಿದ ಮೇಲೆ ಅವರು ಮಾತನಾಡುತ್ತಾರೆ. We have perfect co-operation. ನೀವು ಏನು ಹೇಳಿದರೂ ಕೇಳುವುದಿಲ್ಲ. ಮಾನ್ಯ ಅಧ್ಯಕ್ಷರೆ, ನಾನು ಪ್ರಮುಖವಾದ ವಿಚಾರವನ್ನು ಪ್ರಸ್ತಾಪ ಮಾಡುವುದಕ್ಕೆ ನಿಯಮ 60 ಅಡಿಯಲ್ಲಿ ನೋಟಿಸ್ ಕೊಟಿದ್ದೇನೆ. ಅದು ಬಹಳ ಮುಖ್ಯವಾದಂಥ ವಿಚಾರವಾಗಿದೆ. ಸಂಸದೀಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ನಾವೆಲ್ಲರೂ ಕೆಲಸ ಮಾಡುತ್ತಿದ್ದೇವೆ. ಇತ್ತೀಚೆಗೆ ದಿನಾಂಕ 25-6-2009ರಂದು ರಾಜ್ಯ ಸರ್ಕಾರದ ಆದೇಶದ ಮೇರೆಗೆ ಮುಖ್ಯ ಕಾರ್ಯದರ್ಶಿಯವರು ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ.

ಅಧ್ಯಕ್ಷರು: ಮಾನ್ಯ ವಿರೋಧ ಪಕ್ಷದ ನಾಯಕರೆ, ನಿಲುವಳಿ ಸೂಚನೆಯ ವಿಷಯ ಏನೆಂದು ನನಗೆ ಗೊತ್ತಾಗಿದೆ. ಇವತ್ತು demands ಮೇಲೆ ಚರ್ಚೆ ಪ್ರಾರಂಭವಾಗಬೇಕು. ತಾವು ಕೊಟ್ಟಿರುವ ವಿಷಯದ ಬಗ್ಗೆ public debate ಸಹ ಆಗಿದೆ. ಇದನ್ನು ಸದನದಲ್ಲಿ ಎತ್ತುತ್ತೇನೆ ಎಂದು ತಾವು ಬಹಳ ಸಲ statement ಸಹ ಕೊಟ್ಟಿದ್ದೀರಿ. ಅದನ್ನು ಎತ್ತಲಿಕ್ಕೆ ನಾನು ಅವಕಾಶ ಕೊಡುತ್ತೇನೆ. ಅದಕ್ಕೆ ಸರ್ಕಾರದವರು ಏನು ಉತ್ತರ ಕೊಡುತ್ತಾರೋ ಕೊಡಲಿ. ಒಂದು time

limit ಹಾಕಿ ಇದರ ಚರ್ಚೆಯನ್ನು ಮುಗಿಸಿಬಿಡೋಣ. ಏಕೆಂದರೆ, demands ಮೇಲೆಯೂ ಚರ್ಚೆ ಮಾಡಬೇಕಾಗಿದೆ.

ಶ್ರೀ ಸಿದ್ದರಾಮಯ್ಯ: ಈಗಲೇ ಇದನ್ನು convert ಮಾಡಿ, discussionಗೆ ಅನುಮತಿ ನೀಡಿದರೆ ನಂತರ ಸರ್ಕಾರ ಉತ್ತರ ಕೊಡಬಹುದು.

5. ಸಭಾಧ್ಯಕ್ಷರ ತೀರ್ಪು

ವಿಷಯ: ದಿನಾಂಕ 25–6–2009ರಂದು ರಾಜ್ಯ ಸರ್ಕಾರದ ಆದೇಶದ ಮೇರೆಗೆ ಮುಖ್ಯ ಕಾರ್ಯದರ್ಶಿಯವರು ಸುತ್ತೋಲೆಯನ್ನು ಹೊರಡಿಸಿರುವ ಬಗ್ಗೆ. ನಿಯಮ 60ರ ಅಡಿಯಲ್ಲಿ ನೀಡಿದ್ದ ನಿಲುವಳಿ ಸೂಚನೆಯನ್ನು ತಿರಸ್ಕರಿಸಿ ನಿಯಮ 69ಕ್ಕೆ ಪರಿವರ್ತಿಸಿ, ಚರ್ಚೆಗೆ ಅನುಮತಿ ನೀಡಿರುವ ಬಗ್ಗೆ

ಅಧ್ಯಕ್ಷರು: ನಾನು ಈ ನಿಲುವಳಿ ಸೂಚನೆಯನ್ನು Rule 69 ಗೆ convert ಮಾಡಿ ನಿಮಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಒಂದು ತಾಸಿನಲ್ಲಿ ಈ ಚರ್ಚೆ ಮುಗಿಯಬೇಕು.

6. ನಿಯಮ 69ರ ಮೇರೆಗೆ ಚರ್ಚೆ:

ವಿಷಯ: ದಿನಾಂಕ 25–6–2009ರಂದು ರಾಜ್ಯ ಸರ್ಕಾರದ ಆದೇಶದ ಮೇರೆಗೆ ಮುಖ್ಯ ಕಾರ್ಯದರ್ಶಿಯವರು ಹೊರಡಿಸಿರುವ ಸುತ್ತೋಲೆ ಬಗ್ಗೆ

ಶ್ರೀ ಸಿದ್ದರಾಮಯ್ಯ: ಆಯಿತು, ಒಂದು ತಾಸಿನಲ್ಲೇ ಮುಗಿಸಿಬಿಡೋಣ.

ಶ್ರೀ ಎಸ್. ಸುರೇಶ್ ಕುಮಾರ್: ಒಂದು ತಾಸಿನಲ್ಲೇ ಮುಗಿಸಬೇಕು ಎಂದರೆ ಚರ್ಚೆ ಮುಗಿಸಬೇಕೇ ಅಥವಾ...

ಅಧ್ಯಕ್ಷರು: ಚರ್ಚೆ ಮತ್ತು ಉತ್ತರ ಎರಡೂ ಮುಗಿಯಬೇಕು.

ಶ್ರೀ ಎಸ್. ಸುರೇಶ್ ಕುಮಾರ್: ಅಂದರೆ ಒಂದು ತಾಸಿನಲ್ಲಿ ಚರ್ಚೆ ಮತ್ತು ಉತ್ತರ ಎರಡನ್ನೂ ಮುಗಿಸಬೇಕು.

Sri Siddaramaiah: Let us put it like this, as quickly as possible.

Sri S. Suresh Kumar: That is the very relative term.

ಶ್ರೀ ಸಿದ್ದರಾಮಯ್ಯ: ಒಂದು ಗಂಟೆಯಲ್ಲೇ ಮುಗಿಸಲು ಪ್ರಯತ್ನ ಮಾಡೋಣ. ಇದು ಸರ್ಕಾರಕ್ಕಿಂಥ ಹೆಚ್ಚಾಗಿ ಮಾನ್ಯ ಅಧ್ಯಕ್ಷರ ತೀರ್ಮಾನಕ್ಕೆ ಬಿಟ್ಟಿದ್ದು.

ಅಧ್ಯಕ್ಷರು: ನಿಲುವಳಿ ಸೂಚನೆ ಮುಖಾಂತರ ಮಾನ್ಯ ವಿರೋಧ ಪಕ್ಷದ ನಾಯಕರು ಹಲವಾರು ವಿಷಯಗಳನ್ನು ಸದನಕ್ಕೆ ತೆಗೆದುಕೊಂಡು ಬರುತ್ತೀರಿ.